ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿರುವ ಪೊಯಿನಾಚ್ಚಿ, ಸದಾ ಜನಜಂಗುಳಿಯಿಂದ ಕಿಕ್ಕಿರಿದು ತುಂಬಿರುತ್ತದೆ. ಈ ಜಂಕ್ಷನ್ನಿಗೆ ಬರುವ ಅನೇಕರಿಗೆ ರಾಮಚಂದ್ರನ ಪರಿಚಯವಿದೆ. ತಿಂಗಳ ಚೀಟಿ ಹಣಕಟ್ಟಲು, ಮನೆಗೆ ಮರಳುವಾಗ ಅನಿವಾರ್ಯವೆನಿಸುವ ಬ್ಯಾಟರಿಗಳನ್ನೆಲ್ಲಾ ಮಂದಿ ರಾಮಚಂದ್ರನ ಅಂಗಡಿಯಲ್ಲಿಟ್ಟು ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ಈ ಜಂಕ್ಷನ್ನಿಗೆ ಬರುವವರು ಎಲ್ಲಿಂದ ಬರುತ್ತಾರೆ ಮತ್ತು ಎಲ್ಲಿಗೆ ಹೋಗುತ್ತಾರೆ ಎಂಬ ಮಾಹಿತಿಯೂ ರಾಮಚಂದ್ರನಲ್ಲಿ ದೊರೆಯುತ್ತದೆ. ತಮ್ಮ ಪತ್ನಿಯರೊಂದಿಗೆ ಹಂಚಿಕೊಳ್ಳಲಾಗದ ಕೆಲವು ರಹಸ್ಯಗಳು ರಾಮಚಂದ್ರನ ಅಂಗಡಿಯ ಮುಂಗಟ್ಟಿನಲ್ಲಿ ವಿನಿಮಯಗೊಳ್ಳುತ್ತವೆ. ಆದ್ದರಿಂದಲೇ ಆತನ ಅಂಗಡಿ ಹಲವಾರು ವಿಷಯಗಳ ವಿನಿಮಯದ ಶಾಖೋಪ ಶಾಖೆಗಳ ಟವರ್ ಎಂದೇ ಖ್ಯಾತಿ.

ಅಸ್ಸೈನಾರರ ಫೋನಿಗೆ ಕಿವಿಯಾನಿಸಿದಾಗ, ಶುಕ್ರಿಯಾ ಬಸ್ಸು ಜಂಕ್ಷನ್‌ನಲ್ಲಿ ನಿಂತು ಮೊರೆಯತೊಡಗಿತ್ತು.

ಬಸ್ಸಿನಿಂದ ಮೊದಲು ಕದಿರೇಶ್, ಅವನ ಹಿಂದಿನಿಂದಲೇ ಬಂಗಾಳಿಗಳು ಕೊನೆಗೆ ಗೋಪಾಲ್ ಯಾದವ್ ಇಳಿದರು. ಬಾಂಗಾಳಿಗಳು ರಸ್ತೆ ದಾಟಿ ಬಂದು 'ನಮಶ್ಕಾರ್' ಎಂದು ರಾಮಚಂದ್ರನ ಮುಂದೆ ಹಲ್ಲು ಕಿಸಿಯುತ್ತಾ ನಿಂತರು. ತಕ್ಷಣ ರಾಮಚಂದ್ರ ತೂಫಾನ್ ಬೆರೆಸಿ ಚೆನ್ನಾಗಿ ತಿಕ್ಕಿದ 'ಮಾವ'ದ ಮೂರು ಪೊಟ್ಟಣಗಳನ್ನು ಅವರ ಕೈಗಿತ್ತ. ರೂಢಿಯಂತೆ ಅವರು ಅದರಿಂದ ಒಂದೊಂದು ಚಿಟಕಿ ತೆಗೆದು ದವಡೆಯಲ್ಲಿ ಇಟ್ಟುಕೊಂಡರು. ಎಂಜಲು ಬೆರಳನ್ನು ತಮ್ಮ ತಮ್ಮ ಜೀನ್ಸ್ ಪ್ಯಾಂಟುಗಳಿಗೆ ಒರೆಸಿಕೊಂಡರು. ಅಷ್ಟರಲ್ಲಿ 'ಪಿಕ್‌ಅಪ್' ವ್ಯಾನ್ ಬಂದು ಅವರ ಮುಂದೆ ನಿಂತುಕೊಂಡಿತು. ಮೂವರು ಬಂಗಾಳಿಗಳು ಅದರಲ್ಲಿ ಹತ್ತಿ ಕುಳಿತುಕೊಂಡರು. ಕ್ಷಣಮಾತ್ರದಲ್ಲಿ ವ್ಯಾನು ಪೆರಿಯಾದತ್ತ ವೇಗವಾಗಿ ಸಾಗಿತು. ಅದಾಗಿ ಕೆಲವು ನಿಮಿಷಗಳು ಕಳೆದಿರಬಹುದು. ಪ್ಲಂಬಿಂಗ್‌ನ ಕೆಲಸವಿದೆಯೆಂದು ರಾತ್ರಿಯೇ ಫೋನಾಯಿಸಿದ್ದ ತೋಮಚ್ಚನ ಜೀಪು ಬಂದು ಕದಿರೇಶನ ಮುಂದೆ ನಿಂತುಕೊಂಡಿತು. ದುಸರಾ ಯೋಚಿಸದೆ ಕದಿರೇಶ್ ಸರಕ್ಕನೆ ಅದರಲ್ಲಿ ಹತ್ತಿ ಕುಳಿತುಕೊಂಡ. ಅವನೂ ಹೋದ ನಂತರ ಗೋಪಾಲ್ ಯಾದವ್ ಒಬ್ಬಂಟಿಯಾದ. ಅವನ ಹಿಂಬದಿಗೆ ಬೀಳುತ್ತಿದ್ದ ಬಿಸಿಲಿನ ಝಳ ಹೆಚ್ಚಾಗುತ್ತಲಿತ್ತು. ಗೋಪಾಲ್ ಯಾದವ್ ಎರಡು ತಿಂಗಳುಗಳಿಂದ ಕಾಸರಗೋಡಿನ ಉಳಿಯತಡ್ಕದಲ್ಲಿದ್ದ. ಅಲ್ಲಿ ಅವನ ಭಾವನಿದ್ದ. ಅಲ್ಲಿ ಕೆಲಸ ಕಡಿಮೆಯಾಗುತ್ತಿದ್ದಂತೆ ಗೋಪಾನಿಗೆ ಅಲ್ಲಿರಲು ಸಾಧ್ಯವಾಗಲಿಲ್ಲ. ಹಾಗೆ, ಸುಮ್ಮನೆ ಕುಳಿತಿರುವಾಗ ಭಾವ, ಕದಿರೇಶನ ಬಗ್ಗೆ ಹೇಳಿದ್ದ. ಅದರ ಪರಿಣಾಮವಾಗಿ ಗೋಪಾಲ್ ಯಾದವ್ ನೇರವಾಗಿ ಚೆರ್ಕಳಕ್ಕೆ ಬಂದಿದ್ದ ಕಾಞಂಗಾಡ್ ಕಡೆಗೆ ಹೋಗುವಾಗ ಸಿಗುವ ಪುಟ್ಟ ಪೇಟೆಯ ಛಾಯೆಯಿರುವ ಊರು ವಿದ್ಯಾನಗರ. ಉಳಿಯತಡ್ಕದಲ್ಲಿದ್ದಂತೆ ಕೆಲಸವಿಲ್ಲವೆಂದು ಹೇಳಿ ನೊಣ ಹೊಡೆಯುವ ಕರ್ಮ ಇಲ್ಲಿಲ್ಲವೆಂದು ಕದಿರೇಶ್ ಅವನಿಗೆ ಭರವಸೆ ನೀಡಿದ್ದ. ಕದಿರೇಶನ್ ಒಂಟಿರೂಮಿನ ಮನೆಯ ಹಿಂದಿರುವ ಬೆಂಚೇ ಅವನ ಮಂಚ, ಹಾಸಿಗೆ ವಗೈರೆ... ಮಳೆಗಾಲಕ್ಕೆ ಮುಂಚೆಯೇ ಅಲ್ಲಿಂದ ಬೇರೆಡೆಗೆ ಹೋಗಬೇಕು. ಆದರೆ ರೂಮಿಗೆ ಐದಾರು ಸಾವಿರ ಪಗಡಿ ಕೇಳುತ್ತಾರೆ.

ಒಂದು ಮೀಟಾಪಾನ್ ಜಗಿಯೋಣವೆಂದು ಗೋಪಾಲ್ ಯಾದವ್, ರಾಮಚಂದ್ರನ ಅಂಗಡಿಗೆ ಹೋದ. ಅಪರಿಚಿತನನ್ನು ಕಂಡು ರಾಮಚಂದ್ರ ಕೇಳಿದ:

'ಇದರ್ ನಯಾ ಹೆ ತುಂ?'

'ಹಾ ಬಾಯ್'